# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1084
2. ಸದಸ್ಯರ ಹೆಸರು : ಶ್ರೀ ಅಡಗೂರು ಹೆಚ್ ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 14.12.2023
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಅಧಿವೇಶನದಲ್ಲಿ ಮುಖ್ಯ ಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಆಗಿರುವ ಲೋಪದ ಬಗೆಗಿನ ದೂರಿಗೆ ಸಂಬಂಧಿಸಿದಂತೆ ದಿನಾಂಕ:30.05.2023 ರಂದು ರಾಜ್ಯಪಾಲರ ಕಛೇರಿ ಪತ್ರಕ್ಕೆ ಅನುಸಾರವಾಗಿ ತೆಗೆದುಕೊಂಡ ಕ್ರಮದ ಬಗ್ಗೆ ಪ್ರಸ್ತಾಪಿಸಿದಾಗ ಸರ್ಕಾರವು ಈ ಆರೋಪದ ಬಗ್ಗೆ ಉಪ ಪೊಲೀಸ್ ಆಯುಕ್ತರು, ವಿವಿಐಪಿ ಭದ್ರತೆ, ಬೆಂಗಳೂರು ನಗರ ರವರಿಗೆ ವಹಿಸಿ, ಈ ವರದಿ ಬಾಕಿ ಇದ್ದು, ವರದಿಯನ್ನು ಸ್ವೀಕರಿಸಿದ ನಂತರ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದ್ದು, ಈ ಬಗ್ಗೆ ವರದಿ ಸಲ್ಲಿಕೆಯಾಗಿದೆಯೇ; ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ; | ಮಾನ್ಯ ಮುಖ್ಯಮಂತ್ರಿಯವರ ಪದಗ್ರಹಣ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದ ಬಿ.ಎಸ್. ಶಿವಣ್ಣ ಬಿನ್ ಸುಬ್ಬೇಗೌಡ ರವರು ಕರ್ನಾಟಕ ಕಾಂಗ್ರೆಸ್ ಸಮಿತಿಯ ಜನರಲ್ ಸೆಕ್ರೆಟರಿಯಾಗಿದ್ದು, ದಿನಾಂಕ:20.05.2023 ರಂದು ನಡೆದ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ಸಮಾರಂಭಕ್ಕೆ ಡಿಪಿಎಆರ್ ವತಿಯಿಂದ ನಿಗಧಿಪಡಿಸಿದ್ದ ರೆಡ್‌ಪಾಸ್ ಮೂಲಕ ಪ್ರಮಾಣವಚನ ಸಮಾರಂಭಕ್ಕೆ ಕಂಠೀರವ ಕ್ರೀಡಾಂಗಣಕ್ಕೆ ಪ್ರವೇಶ ಪಡೆದಿರುತ್ತಾರೆ. ಈ ಸಮಯದಲ್ಲಿ ಭದ್ರತೆಗಾಗಿ ನಿಯೋಜಿಸಿದ್ದ ಪೊಲೀಸ್ ಅಧಿಕಾರಿಯವರು ಬಿ.ಎಸ್.ಶಿವಣ್ಣ ರವರಿಗೆ ನೀಡಿದ್ದ ರೆಡ್‌ಪಾಸ್ ಅನ್ನು ತಪಾಸಣೆ ಮಾಡಿ ಒಳಗೆ ಬಿಟ್ಟಿರುವುದು ಕಂಡುಬಂದಿರುತ್ತದೆ.<br><br>ಶ್ರೀ ಬಿ.ಎಸ್. ಶಿವಣ್ಣ ರವರು ಕಾನೂನನ್ನು ಉಲ್ಲಂಘನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ವೇದಿಕೆಯಲ್ಲಿ ಕಾಣಿಸಿಕೊಂಡು ಭದ್ರತಾ ಲೋಪವೆಸಗಿರುವುದು ಕಂಡು ಬಂದಿರುವುದಿಲ್ಲ. |
| ಆ | ಈ ವೇದಿಕೆ ಕೆಳಗೆ ಜನ ಪ್ರತಿನಿಧಿಗಳು ಅನೇಕ ಗಣ್ಯರು ಆಸೀನರಾಗಿದ್ದು, ಭದ್ರತೆ, ಶಿಷ್ಟಾಚಾರ ಪಾಲನೆಯಾಗಿದ್ದಂತಹ ವೇದಿಕೆ ವ್ಯಕ್ತಿಯೊಬ್ಬರು ಅಕ್ರಮವಾಗಿ ಕಾಣಿಸಿಕೊಂಡು ವೇದಿಕೆ ಮೇಲೆ ಅನುಚಿತವಾಗಿ ವರ್ತಿಸಿರುವ ಬಗ್ಗೆ ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದಿರುವುದು ಮತ್ತು ಇವರ ವಿರುದ್ಧ ಯಾವ ರೀತಿ ಕ್ರಮಕೈಗೊಳ್ಳಲಾಗಿದೆ; | ದಿನಾಂಕ: 20.05.2023 ರಂದು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳ ಪದಗ್ರಹಣ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಡಿಪಿಎಆರ್ ವತಿಯಿಂದ ಸುಮಾರು 250 ವಿವಿಐಪಿ ರೆಡ್‌ಪಾಸ್‌ಗಳು ವಿತರಣೆಯಾಗಿರುತ್ತದೆ.<br><br>ಶ್ರೀ ಬಿ.ಎಸ್. ಶಿವಣ್ಣರವರು ಡಿಪಿಎಆರ್ ವತಿಯಿಂದ ನೀಡಿರುವ ರೆಡ್‌ಪಾಸ್ ಮೂಲಕ ಸಮಾರಂಭಕ್ಕೆ ಹಾಜರಾಗಿರುವುದರಿಂದ ಇಲ್ಲಿ ಯಾವುದೇ ಪೊಲೀಸ್ ವೈಫಲ್ಯ ಮತ್ತು ಲೋಪಗಳು ಕಂಡುಬಂದಿರುವುದಿಲ್ಲ ಹಾಗೂ ಇವರ ವಿರುದ್ಧ ವಿಭಾಗೀಯ ಪೊಲೀಸ್ ಠಾಣೆಗಳಲ್ಲಿ ಯಾವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವುದು ಕಂಡುಬಂದಿರುವುದಿಲ್ಲ.<br><br>ಈ ವೇದಿಕೆಯಲ್ಲಿ ವ್ಯಕ್ತಿಯೊಬ್ಬರು ಅಕ್ರಮವಾಗಿ ವೇದಿಕೆ ಮೇಲೆ ಕಾಣಿಸಿಕೊಂಡು ಅನುಚಿತವಾಗಿ ವರ್ತಿಸಿರುವ ಬಗ್ಗೆ ಭದ್ರತಾ ಸಿಬ್ಬಂದಿಯವರು ಯಾವುದೇ ವ್ಯಕ್ತಿಯನ್ನು ವಶಕ್ಕೆ ಪಡೆದಿರುವುದಿಲ್ಲ.<br><br>ಶ್ರೀ ಬಿ.ಎಸ್. ಶಿವಣ್ಣರವರ ವಿರುದ್ಧ ವಿಭಾಗೀಯ ಪೊಲೀಸ್ ಠಾಣೆಗಳಲ್ಲಿ ಯಾವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವುದು ಕಂಡುಬಂದಿರುವುದಿಲ್ಲ. |
| ಇ | ಈ ಆರೋಪದ ಬಗ್ಗೆ ಭದ್ರತೆಗೆ ನಿಯೋಜಿಸಿರುವ ಅಧಿಕಾರಿಗಳು ಸಿಬ್ಬಂದಿಗಳು ಭದ್ರತಾ ಲೋಪವು ಕಾರಣವಾಗಬಹುದು ಎಂಬ ದೃಷ್ಟಿಯಿಂದ ತಾವು ಸಹ ತಮ್ಮ ಮೇಲಿನ ಆರೋಪದ ಬಗ್ಗೆಯೂ ರಕ್ಷಿಸಿಕೊಳ್ಳಲು ಭದ್ರತಾ ಲೋಪ ಹಾಗೂ ಶಿಷ್ಟಚಾರ ಕಾನೂನು ಉಲ್ಲಂಘನೆಯಾಗಿರುವ ಬಗ್ಗೆ ಪರಿಶೀಲಿಸದೇ ಆರೋಪಿಯೂ ಈ ಪ್ರಕರಣದಿಂದ ತಪ್ಪಿಸಿಕೊಳ್ಳಲು ಮುಂದಾಗಿದ್ದು, ಈತನ ಹೇಳಿಕೆಯನ್ನೇ ಆಧರಿಸಿ ಪ್ರಕರಣವನ್ನು ಮುಚ್ಚಿಹಾಕಿ ಆರೋಪಿಯನ್ನು ರಕ್ಷಿಸಿ ತಾವು ಸಹ ಭದ್ರತಾ ಲೋಪದಿಂದ ಲೋಪವಾಗಿರುವುದನ್ನು ಮುಚ್ಚಿ ಹಾಕುವ ಹುನ್ನಾರ ನಡೆಸಿರುವುದರಿಂದ ಈ ಬಗ್ಗೆ ಸಂಪೂರ್ಣವಾಗಿ ತನಿಖೆ ನಡೆಸಿ ಕ್ರಮಕೈಗೊಳ್ಳಬಹುದೇ; | |
| ಈ | ಈ ಕ್ರಮವಾಗಿ ವೇದಿಕೆ ಮೇಲೆ ಬಂದಿರುವ ವ್ಯಕ್ತಿಯ ಮೇಲಿನ ಇತರೆ ಆರೋಪಗಳ ಬಗ್ಗೆ ಯಾವ ರೀತಿ ಕ್ರಮಕೈಗೊಳ್ಳಲಾಗಿದೆ? (ವಿವರ ನೀಡುವುದು). | |

ಹೆಚ್‌ಡಿ 127 ಪಿಸಿಇ 2023

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು